**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಬಂಗಾರಪೇಟೆ**

**ಸಿಸಿ ಸಂಖ್ಯೆ:12/2018** **CW-1** **PW-1**

**ಸಾಕ್ಷಿಯನ್ನು ದಿಃ 05.08.2023 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಹೆಸರುಃ ಹನುಮಕ್ಕ**
**ಗಂಡನ ಹೆಸರುಃ ರಾಮಯ್ಯ**
**ವಯಸ್ಸುಃ 55**
**ವೃತ್ತಿಃ** ವ್ಯವಸಾಯ
**ವಾಸ ಸ್ಥಳಃ ಮಾವಳ್ಳಿ**

**ಮುಖ್ಯವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ 2 ಮತ್ತು 3 ನನ್ನ ಮಕ್ಕಳು. ಚಾಸಾ 4 ನನ್ನ ತಂಗಿ ಮಗ. ಚಾಸಾ 5 ನನ್ನ ಸೊಸೆ, ಚಾಸಾ 6 ನನ್ನ ಗಂಡ. ಆರೋಪಿಗಳ ಪರಿಚಯ ಇರುತ್ತದೆ. ಆರೋಪಿಗಳು ನಮ್ಮ ಜಮೀನು ಮತ್ತು ಮನೆಯ ಪಕ್ಕ ಇರುತ್ತಾರೆ. ನಮಗೆ ಸೇರಿದ ಜಮೀನು ಮಾವಳ್ಳಿ ಗ್ರಾಮದ ಸರ್ವೆ ನಂ.177 ಇದ್ದು, ವಿಸ್ತೀರ್ಣ 4 ಎಕರೆ ಇರುತ್ತದೆ. ಸುಮಾರು 6 ವರ್ಷಗಳ ಹಿಂದೆ ನಾವು ಸದರಿ ಜಮೀನಿನಲ್ಲಿ ಜೆಸಿಬಿ ಮುಖಾಂತರ ಕೆಲಸ ಮಾಡುತ್ತಿದ್ದಾಗ ಎಲ್ಲಾ ಆರೋಪಿಗಳು ಬಂದು ಗಲಾಟೆ ಮಾಡಿರುತ್ತಾರೆ. ಆರೋಪಿಗಳು ಸದರಿ ಜಮೀನು ತಮಗೆ ಸೇರಿದ್ದು ಎಂದು ಏಕೆ ಬಂದಿರುತ್ತೀರಿ ಎಂದು ಗಲಾಟೆ ತೆಗೆದು ಹಲ್ಲೆ ಮಾಡಿರುತ್ತಾರೆ. ಆರೋಪಿಗಳು ನನಗೆ ಕೈ ಯಿಂದ ಹಲ್ಲೆ ಮಾಡಿ ಕಾಲಿನಿಂದ ಒದ್ದಿರುತ್ತಾರೆ. ಚಾಸಾ 2 ರವರ ನೈಟಿಯನ್ನು ಹಿಡಿದು ಎಳೆದಾಡಿ ಹರಿದು ಹಾಕಿ, ಮಾನಭಂಗ ಪ್ರಯತ್ನ ಮಾಡಿರುತ್ತಾರೆ. ಚಾಸಾ 3 ರವರಿಗೆ ಆರೋಪಿ 8 ರಿಂದ 11 ರವರು ಅವಾಚ್ಯ ಶಬ್ದಗಳಿಂದ ಬೈದು, ಕಾಲಿನಿಂದ ಒದ್ದಿರುತ್ತಾರೆ. ಆರೋಪಿ 8 ಮತ್ತು 10 ರವರು ಚಾಸಾ 4 ರವರ ಮೇಲೆ ಕೈ ಯಿಂದ ಹಲ್ಲೆ ಮಾಡಿರುತ್ತಾರೆ. ಚಾಸಾ 5 ರವರಿಗೆ ಆರೋಪಿ 6 , 11 ರವರು ಕೈಯಿಂದ ಹೊಡೆದಿರುತ್ತಾರೆ. ಆರೋಪಿ 1 , 2 ಮತ್ತು 12 ರವರು ಚಾಸಾ 6 ರವರ ಮೇಲೆ ಹಲ್ಲೆ ಮಾಡಿರುತ್ತಾರೆ. ಈ ಸಂಬಂಧ ಬಂಗಾರಪೇಟೆ ಪೊಲೀಸ್ ಠಾಣೆಗೆ ದೂರು ನೀಡಿರುತ್ತೇನೆ. ದೂರು ಮತ್ತು ಅದರಲ್ಲಿರುವ ತಮ್ಮ ಸಹಿಯನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದು , ದೂರನ್ನು ನಿಪಿ

1 ಎಂದು, ಸಾಕ್ಷಿದಾರರ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು. ಗಲಟೆಯಾದ 6 ದಿನಗಳ ನಂತರ ಪೊಲೀಸರು ಸ್ಥಳಕ್ಕೆ ಬಂದು ಪಂಚನಾಮೆ ಮಾಡಿ ಎರಡು ದೊಣ್ಣೆಗಳು ಮತ್ತು ನೈಟಿಯನ್ನು ಜಪ್ತಿ ಮಾಡಿರುತ್ತಾರೆ. ಸದರಿ ಪಂಚನಾಮೆಯನ್ನು ನಿಪಿ 2 ಎಂದು, ಸಾಕ್ಷಿಯ ಸಹಿಯನ್ನು ನಿಪಿ 2(ಎ) ಎಂದು ಗುರುತಿಸಲಾಯಿತು. ಎರಡು ದೊಣ್ಣೆಗಳನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದು ಅವುಗಳನ್ನು ಮು.ಮಾ 1 ಮತ್ತು 2 ಎಂದು ಹಾಗೂ ನೈಟಿಯನ್ನು ಮು.ಮಾ 3 ಎಂದು ಗುರುತಿಸಲಾಯಿತು.

**(ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಎಪಿಪಿರವರು ಕೋರಿರುತ್ತಾರೆ. ಅದರಂತೆ ಅನುಮತಿ ನೀಡಿದೆ.)**

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಆರೋಪಿ 5 ಮತ್ತು 7 ರವರು ಚಾಸಾ 2 ರವರ ನೈಟಿಯನ್ನು ಹರಿದು ಹಾಕಿರುತ್ತಾರೆ ಎಂದರೆ ಸರಿ. ಆರೋಪಿ 8 ಮತ್ತು 9 ರವರು ಚಾಸಾ 3 ಮತ್ತು 6 ರವರಿಗೆ ದೊಣ್ಣೆಯಿಂದ ಹೊಡೆದು ಗಾಯಗೊಳಿಸಿರುತ್ತಾರೆ ಎಂದರೆ ಸರಿ. ಚಾಸಾ 5 ರವರಿಗೆ ಆರೋಪಿ 4 ಮತ್ತು 12 ರವರು ದೊಣ್ಣೆಯಿಂದ ಹೊಡೆದು ಗಾಯಗೊಳಿಸಿರುತ್ತಾರೆ ಎಂದರೆ ಸರಿ. ಆರೋಪಿಗಳು ನಮಗೆ ಪ್ರಾಣಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. ಆರೋಪಿಗಳು ಕಾಂಪೌಂಡ್ ಕಲ್ಲು ಕೂಚಗಳನ್ನು ನಾಶ ಪಡಿಸಿ 10 ಸಾವಿರ ರೂಗಳನ್ನು ನಷ್ಟ ಪಡಿಸಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ವಕೀಲರು ಸಮಯ ಕೋರಿದ್ದು ರೂ.500 ಖರ್ಚಿನೊಂದಿಗೆ ಸಮಯ ನೀಡಿಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).

ಓ ಹೇ ಕೇ ಸರಿ ಇದೆ.

**sd/-**

**(ಕೇಶವಮೂರ್ತಿ.ಬಿ)**

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ., ಬಂಗಾರಪೇಟೆ